# ‘ಆಗ ರಿಕ್ಷಾ ಓಡಿಸಿದ್ದೆ, ಈಗ ಕೋಣ ಓಡಿಸುತ್ತಿರುವೆ



**ಕಾರ್ತಿಕ್ ಅತ್ತಾವರ**
**ಕಲರ್ಸ್ ಕನ್ನಡ**
**‘ಶ್ರೀಗೌರಿ’ಯ ಅಪ್ಪು**

◆ **ಕಿರುತೆರೆಗೆ ದೀರ್ಘಕಾಲದ ರಜೆ ತೆಗೆದುಕೊಂಡಿದ್ದು ಏಕೆ?**

ಸಿನಿಮಾದಲ್ಲಿ ಮಾಡಬೇಕು ಎನ್ನುವ ಆಸೆ ಇತ್ತು. ಕಥೆ ಬರೆಯುವ ಹವ್ಯಾಸ ಕೂಡ ಇತ್ತು. ‘ಅನುಕ್ತ’ ಸಿನಿಮಾಕ್ಕೆ ಕಥೆ ರೂಪಿಸಿದೆ. ಅದಕ್ಕೆ ಚಿತ್ರಕಥೆ ಕೂಡ ನನ್ನದೆ. ಈ ಸಂಬಂಧ ಮೂರು ವರ್ಷ ರಜೆ ತೆಗೆದುಕೊಂಡಿದ್ದೆ. ಅದಕ್ಕೆ ಸಂಪೂರ್ಣ ಅರ್ಪಿಸಿಕೊಂಡಿದ್ದರಿಂದ ಅನಿವಾರ್ಯವಾಯಿತು.

◆ **‘ಯಶೋದೆ’ ದಿಢೀರೆಂದು ನಿಲ್ಲಿಸಿದ ಸಂದರ್ಭದಲ್ಲಿ ನಿಮ್ಮಲ್ಲಾದ ತಲ್ಲಣ ಹೇಗಿತ್ತು?**

ಸಾಮಾನ್ಯವಾಗಿ ಎಲ್ಲರಿಗೂ ಬೇಜಾರಾಗುತ್ತದೆ. ಒಂದು ಪಾತ್ರವನ್ನು ತುಂಬ ಇಷ್ಟಪಟ್ಟು ಮಾಡುತ್ತಿರುವಾಗ ಅದು ಇದ್ದಕ್ಕಿದ್ದಂತೆ ವೈಂಡಪ್ ಆದರೆ ತಕ್ಷಣ ಏನೆಂದು ಗೊತ್ತಾಗುವುದಿಲ್ಲ. ‘ಯಶೋದೆ’ಯ ಆದಿ ಪಾತ್ರ ನನಗೂ ತುಂಬ ಇಷ್ಟ ಆಗಿತ್ತು. ತಾಂತ್ರಿಕ ಕಾರಣದಿಂದ ನಿಲ್ಲಿಸುವುದು ಅನಿವಾರ್ಯವಾಗಿತ್ತು. ನಾನೂ ಆ ಪಾತ್ರವನ್ನು ಮೈದುಂಬಿಸಿಕೊಂಡಿದ್ದೆ. ಕಲಾವಿದರಿಗೆ ತಕ್ಷಣ ಬೇರೆ ಪಾತ್ರವನ್ನು ಪಡೆಯುವುದೂ ಕಷ್ಟ. ಆ ಧಾರಾವಾಹಿಗೆ ಅದರದ್ದೇ ಆದ ವೀಕ್ಷಕರು ಸೃಷ್ಟಿಯಾಗಿದ್ದರು. ಅವರಿಗೂ ಕೊಂಚ ಬೇಸರ ಅನ್ನಿಸಿದರೂ ಅದು ಅಂದಿನ ಅಗತ್ಯ.

◆ **‘ಶ್ರೀಗೌರಿ’ ಮೇಲೆ ‘ಕಾಂತಾರ’ ಪ್ರಭಾವ ಇದೆಯಾ? ನಿಮ್ಮ ಕಥೆಯ ಹೃದಯದ ಹಂದರ ಏನು?**

ಕಂಬಳ ಎನ್ನುವುದು ಒಂದು ಸಿನಿಮಾಕ್ಕೆ ಸೀಮಿತ ಅಲ್ಲ. ಅದು ನಮ್ಮ ಕರಾವಳಿ ಸಂಪ್ರದಾಯದ ಭಾಗ, ಒಂದು ಜನಪದ ಕ್ರೀಡೆ. ಕರಾವಳಿ ಭಾಗದಲ್ಲಿ ದೈವ, ಯಕ್ಷಗಾನ ಮತ್ತು ಕಂಬಳ ಅಸ್ಮಿತೆ ಇದ್ದಂತೆ. ಅಲ್ಲಿ ಕಂಬಳದ ಕೋಣ ಕಟ್ಟುವುದು ಹೆಮ್ಮೆಯ ವಿಷಯ. ಈ ಕಥೆ ದೈವ ಆರಾಧನೆಯ ಮೂಲಕ ಸ್ಥಳೀಯ ಜೀವನ ಪದ್ಧತಿಯನ್ನು ಹೇಳುತ್ತದೆ. ಕಂಬಳದಲ್ಲಿ ಗುರಿ ಮುಟ್ಟುವುದು ಎಷ್ಟು ಮುಖ್ಯವೋ ಹಾಗೆಯೇ ಅಲ್ಲಿನ ಜೀವನ ಮಾರ್ಗವೂ ಮುಖ್ಯ ಆಗುತ್ತದೆ. ಸಿನಿಮಾಕ್ಕೂ ಈ ಧಾರಾವಾಹಿಗೂ ಹೋಲಿಕೆ ಸರಿ ಅಲ್ಲ. ಇದೇ ಬೇರೆ ರೀತಿಯಲ್ಲಿ ಸಾಗುತ್ತದೆ. ಕಥೆ ಹೇಳುವುದರ ಮೇಲೆ ಅದು ನಿಲ್ಲುತ್ತದೆ.

◆ **ನಟ ಆಗುವ ಹುಮ್ಮಸ್ಸು ಬಂದಿದ್ದು ಹೇಗೆ?**

ನಾನು ಐಟಿ ಕ್ಷೇತ್ರದ ಉದ್ಯೋಗಿ. 2009ರ ಸಮಯದಲ್ಲಿ ನಮ್ಮ ಸಹೋದ್ಯೋಗಿ ‘ರಿಕ್ಷಾ ಡ್ರೈವರ್’ ಎಂಬ ತುಳು ಸಿನಿಮಾ ಮಾಡುತ್ತಿದ್ದರು. ನನಗೆ ಒಂದು ಪಾತ್ರ ಮಾಡಬಹುದೇ ಎಂದು ಕೇಳಿದರು. ನನಗೆ ನಟನೆಯ ಗಂಧಗಾಳಿ ಗೊತ್ತಿರಲಿಲ್ಲ. ಕ್ಯಾಮೆರಾ ಎದುರಿಸುವುದೂ ಗೊತ್ತಿರಲಿಲ್ಲ. ಶಾಲಾ ಕಾಲೇಜುಗಳಲ್ಲಿ ವಾರ್ಷಿಕೋತ್ಸವ ಬಿಟ್ಟರೆ ಬೇರೆ ಎಲ್ಲೂ ಕಾಣಿಸಿಕೊಂಡಿರಲಿಲ್ಲ. ಅದಕ್ಕಿಂತ ಸ್ವಲ್ಪ ಮುಂಚೆ ಕನ್ನಡದ ‘ಚೆಲ್ಲಾಪಿಲ್ಲಿ’ ಸಿನಿಮಾದಲ್ಲಿ ಪುಟ್ಟ ಅವಕಾಶ ಸಿಕ್ಕಿತ್ತು. ಅದರಲ್ಲಿ 70 ಜನರ ಗುಂಪಿನಲ್ಲಿ ನನ್ನನ್ನೂ ಒಂದು ಕಡೆ ನಿಲ್ಲಿಸಿದ್ದರು. ಕ್ಯಾಮೆರಾ ಎಲ್ಲಿ ಇದೆ ಎನ್ನುವುದೇ ಗೊತ್ತಿರಲಿಲ್ಲ. ಆ ಪರಿಸರ ನನಗೆ ಇಷ್ಟ ಆಯಿತು. ಇಲ್ಲಿ ನಾನು ಶಾಶ್ವತವಾಗಿ ನೆಲೆಗೊಳ್ಳಬೇಕು ಎನ್ನುವ ಭಾವನೆ ಬಂತು. ಹಾಗಾಗಿ ನನ್ನ ಆಸಕ್ತಿ ಐಟಿಯಲ್ಲಿ ಕಡಿಮೆ ಆಗ್ತಾ ಬಂತು. ಅದರ ಪ್ರೇರಣೆಯಿಂದ ‘ರಿಕ್ಷಾ ಡ್ರೈವರ್’ನಲ್ಲಿ ನಾಯಕ ಆಗಲು ಒಪ್ಪಿದೆ. ಆದರೆ ನೀವು ಹೇಳಿಕೊಡಬೇಕು ಎಂದು ಆ ತಂಡಕ್ಕೆ ಕೇಳಿಕೊಂಡೆ. ನಂತರ ಕೆಲಸದ ಯೋಚನೆ ಶುರುವಾಯಿತು. ತೊಂದರೆ ಆದರೂ ಕೆಲಸವನ್ನು ಬಿಡುವ ನಿರ್ಧಾರ ಮಾಡಿದೆ. ಬಣ್ಣ ಹಚ್ಚಿದ ನಂತರ ನಟನೆಯನ್ನು ಕಲಿಯಲು ಆರಂಭಿಸಿದೆ. ಎರಡು ತಿಂಗಳು ಕಳೆದ ಮೇಲೆ ಯಾವ ಕೆಲಸವೂ ಇರಲಿಲ್ಲ. ಮತ್ತೆ ವಾಪಾಸ್ ಕೆಲಸಕ್ಕೆ ಸೇರುವ ಪ್ರಯತ್ನ ಮಾಡಿದೆ. ಕೆಲಸ ಸಿಗಲಿಲ್ಲ. ಎರಡು ವರ್ಷ ಕೆಲಸ ಇಲ್ಲದೆ ಅವಕಾಶಕ್ಕಾಗಿ ಕಾಯುತ್ತಾ ಕುಳಿತೆ. ನಮ್ಮ ಮನೆಯಲ್ಲಿ ನನ್ನ ತೊಂದರೆಯನ್ನು ಹೇಳಲು ಆಗದೆ ತೊಳಲಾಡಿದೆ. ಯಾವುದಾದರೂ ಸಿನಿಮಾಕ್ಕೆ ಅವಕಾಶ ಸಿಗಬಹುದು ಎನ್ನುವ ನಿರೀಕ್ಷೆಯಲ್ಲಿ ಇದ್ದವನಿಗೆ, ಪತ್ರಿಕೆಯೊಂದರ ನನ್ನ ಸಂದರ್ಶನದಿಂದ ಧಾರಾವಾಹಿಗಳಿಗೆ ಕರೆಯಲು ಆರಂಭಿಸಿದರು. ಕಲರ್ಸ್ ಕನ್ನಡದ ‘ಯಶೋದೆ’ ನನಗೆ ಒಪ್ಪಿಗೆ ಆಯಿತು. ಅಲ್ಲಿಂದ ನನ್ನ ಜೀವನ ಒಂದು ಹಾದಿಗೆ ಬಂತು.

◆ **ಅಪ್ಪು ಪಾತ್ರ ನಿಮಗೆ ಹೇಗೆನಿಸುತ್ತಿದೆ?**

ಒಬ್ಬ ಸಾಮಾನ್ಯ ಹುಡುಗ, ಬಹುತೇಕ ಮನೆಯಲ್ಲಿಯೂ ಅಂತಹವನು ಇರುತ್ತಾನೆ. ಕನಿಷ್ಠ ಶೇ. 90ರಷ್ಟು ಹುಡುಗರು ಹಾಗೆ ಇರ್ತಾರೆ. ತಾಯಿ ಮೇಲೆ ಅವನು ಇಟ್ಟಿರುವ ಪ್ರೀತಿ ಅಪೂರ್ವ. ಆತ ತನ್ನ ತಾಯಿಯನ್ನು ನೋಡುವ ಬಗೆಯೇ ಮನ ಮಿಡಿಯುವಂತಿದೆ. ಅವನ ವಿಶೇಷ ಗುಣ ಏನೆಂದರೆ ಆತ ಎಂದೂ ತನ್ನ ಸ್ವಾರ್ಥ ಹಿತದ ಬಗ್ಗೆ ಯೋಚನೆ ಮಾಡುವುದಿಲ್ಲ. ಯಾರಿಗಾದರೂ ಸಹಾಯ ಬೇಕಿದ್ದರೆ ಮುಂದೆ ಹೋಗುತ್ತಾನೆ. ಅದರಿಂದ ತನಗೆ ಏನೆ ತೊಂದರೆಗಳು ಎದುರಾದರೂ ಅದನ್ನು ತೋರಿಸಿಕೊಳ್ಳುವುದಿಲ್ಲ. ಅವನ ತಾಯಿ ನಾಟಿ ವೈದ್ಯೆ. ಆಕೆಗೆ ಊರಲ್ಲಿ ಗೌರವ ಇದೆ. ಅಪ್ಪುವಿನದು ಯಾರಿಂದಲೂ ಪ್ರತಿಫಲವನ್ನು ನಿರೀಕ್ಷಿಸದೆ ಸಮಾಜಮುಖಿಯಾಗಿ ತುಡಿಯುವ ಮನಸು. ಆದರೆ ಆತನ ವ್ಯಕ್ತಿತ್ವಕ್ಕೆ ಭಿನ್ನ ಆಯಾಮಗಳೂ ಉಂಟು. ತಾಯಿಯ ಮಗನಾಗಿ, ದಣಿಯ ಸೇವಕನಾಗಿ, ಗೆಳೆಯರ ಗೆಳೆಯನಾಗಿ, ಊರ ಮಗನಾಗಿ ಹೀಗೆ ಬೇರೆ ರೀತಿಯಲ್ಲಿ ಕಾಣಿಸಿಕೊಳ್ಳುತ್ತಾನೆ. ಒಟ್ಟಾರೆ, ಅಪ್ಪು ಜವಾಬ್ದಾರಿಯನ್ನು ಹೊಂದಿರುವ ಪಾತ್ರ. ತನ್ನ ಜನರಿಗಾಗಿ ಏನೇ ಮಾಡಲು ಸಿದ್ಧ.

■ **ರಾಘವೇಂದ್ರ ಕೆ.**